ಶ್ರೀ ಎಂ. ವಿ. ಕೃಷ್ಣಪ್ಪ.—ಹಾಗಲ್ಲ. ಶ್ರೀ ಚೆನ್ನಬೈರೇಗೌಡರು ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಹೇಳಿದೆ.

Sri C. J. MUCKANNAPPA.—The Hon'ble Minister said if the Municipalities indulge in developmental activities, they will get loan. May I know whether the Municipalities indulging in rural development only will get loan or the Municipalities indulging in development of urban areas ?

Sri M. V. KRISHNAPPA.—Most of the Municipalities who want loan will get it.

Sri C. J. MUCKANNAPPA.—May I know the functions of Taluk Boards and Village Panchayats ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಳ್ಳಿಗಳಲ್ಲಿ ರೈತ ಕೊಡತಕ್ಕಂಥ ಕಂದಾಯದ ಸ್ವಲ್ಪ ಭಾಗವನ್ನು ಹಳ್ಳಿಯ ಅಭಿವೃದ್ಧಿಗಾಗಿ ಕೊಡಲಾಗುವುದು. ಅದೇ ರೀತಿಯಾಗಿ ಟೌನುಗಳಲ್ಲಿ ನಹ ಏತಕ್ಕೆ ಕೊಡಬಾರದು ಎಂದು ಅನ್ನಿಸುತ್ತದೆ. ಆದರೆ ಕಾನೂನಿನಲ್ಲಿ ಆ ರೀತಿ ಪ್ರೊವೈಡ್ ಮಾಡಿಲ್ಲ.

Mr. SPEAKER.—The House will decide about the Debate on principles of jurisprudence. If the House decides that it is improper, it will not accept it.

Sri C. J. MUCKANNAPPA.—Do Government consider to give a part of the octroi and other tolls collected by the Municipalities to the respective villages or the Taluk Boards for rural development work ?

Sri M. V. KRISHNAPPA.—The Hon'ble Member may put that question to the concerned Minister.

Amount claimed for work of the Upper Krishna Project.

*Q.—24. Sri K. LAKKAPPA (Hebbur).—

Will the Government be pleased to state :—

(*a*) the number of contractors who were entrusted with the work at the time of shifting the dam site from Narayanpur to Siddapur of Upper Krishna Project ;

(*b*) whether it is a fact that one of the contractors has claimed eleven lakhs of rupees from the Department for the reason of shifting the dam site to Siddapura ;

(*c*) what is the amount recommended by the Superintending Engineer, Upper Krishna Project, in this behalf ;

(*d*) whether the Government have settled the claim by passing orders ?

*A.—Sri S. NIJALINGAPPA (Chief Minister).—

(*a*) One.
(*b*) Yes.
(*c*) Rs. 51,500. The matter is under scrutiny by Chief Engineer.
(*d*) Not yet.

ಶ್ರೀ ಕೆ. ಲಕ್ಕಪ್ಪ.—ಚೀಫ್ ಇಂಜಿನಿಯರವರು ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್ ಇವರೀರ್ವರೂ ಹಾಲೆ ಸರ್ಕಾರಕ್ಕೆ ಶಿಫಾರ್ಸ್ ಮಾಡಿರತಕ್ಕ ಹಣ ಕಂಟ್ರಾಕ್ಟರಿಗೆ ನಲ್ಲುವ ಮೊಬಲಗಿಗಿಂತ 4—5 ಪಟ್ಟು ಜಾಸ್ತಿ ಇದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

† ಶ್ರೀ ಎಸ್. ನಿಜಲಿಂಗಪ್ಪ.—ಈ ಪ್ರಶ್ನೆಯೇ ನನಗೊಂದು ಆಶ್ಚರ್ಯಕರವಾದ ವರ್ತಮಾನವಾಗಿದೆ.

ಶ್ರೀ ಬಿ. ಬೈರಪ್ಪಾಜಿ.—ಅಲ್ಲಿ 54,500 ರೂಪಾಯಿಗಳ ಕೆಲಸ ನಡೆದಿದೆ ಎಂಬುದನ್ನು ಪರಿಶೀಲನೆ ಮಾಡುವುದಕ್ಕೆ ಮುನ್ನ ಆ ಹಣವನ್ನು ಕೊಡುವುದಕ್ಕೆ ಹೇಗೆ ತೀರ್ಮಾನ ಮಾಡಿದರು ?

ಅಧ್ಯಕ್ಷರು.—ತೀರ್ಮಾನ ಮಾಡಿದ್ದಾರೆಂದು ಎಲ್ಲಿ ಹೇಳಿದ್ದಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲಿ ಪ್ರಶ್ನೆ ಕೇಳಿರತಕ್ಕದ್ದು ಸ್ಪಷ್ಟವಾಗಿಲ್ಲ. ಕಂಟ್ರಾಕ್ಟರೇನೋ 11 ಲಕ್ಷ ಕೇಳಿರಬಹುದು, ಆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು 54,500 ರೂಪಾಯಿಗಳನ್ನು ಕೊಡಬಹುದೆಂದು ಶಿಫಾರ್ಸ್ ಮಾಡಿದ್ದರೂ ಅದನ್ನು ಇನ್ನೊಮ್ಮೆ ಪರಿಶೀಲನೆ ಮಾಡಬೇಕೆಂದು ಹೇಳಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಕಂಟ್ರಾಕ್ಟರು ಅಲ್ಲಿ ಕೆಲಸವನ್ನು ಒಪ್ಪಿಕೊಳ್ಳುವ ಮುನ್ನ ಸ್ಥಳಪರಿವೀಕ್ಷಣೆ ಯಾದರೆ ಅವನ್ನು ಮಾಡಿರತಕ್ಕ ಕೆಲಸಕ್ಕೆ ಹಣ ಕೊಡಬೇಕೆಂಬ ಷರತ್ತನ್ನು ಹಾಕಿದ್ದಾನೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಕಂಡೀಷನ್ ಹಾಕಿರಲಿ, ಹಾಕದೆ ಇರಲಿ, ಮಾಡಿರತಕ್ಕ ಕೆಲಸಕ್ಕೆ ನಾವು ಹಣವನ್ನು ಕೊಡಲೇಬೇಕು.

ಶ್ರೀ ಕೆ. ಲಕ್ಕಪ್ಪ.—ಕಂಟ್ರಾಕ್ಟರು ಚೀಫ್ ಇಂಜಿನಿಯರ ಮೇಲೆ ಪ್ರಭಾವವನ್ನು ಬೀರಿ 11 ಲಕ್ಷ ರೂಪಾಯಿ ಕೇಳಿರತಕ್ಕದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಆ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಇಲ್ಲಿ ಕಂಟ್ರಾಕ್ಟರು 11 ಲಕ್ಷ ಕೇಳಿರತಕ್ಕದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿರತಕ್ಕ ಪ್ರಶ್ನೆಗೆ ಉತ್ತರವಾಗಿ ಸರ್ಕಾರದವರು "ಹೌದು," ಎಂದು ಉತ್ತರವನ್ನು ಕೊಡಲಾಗಿದೆ. ಅಂದರೆ ಅಲ್ಲಿ ಅತ ಅಷ್ಟು ಕೆಲಸಮಾಡಿವ್ವಾರೆಯೆ ಎಂಬುದನ್ನು ಪರಿಶೀಲನೆ ಮಾಡಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅಲ್ಲಿ ಎಷ್ಟು ಕೆಲಸಮಾಡಿದ್ದರೆ ಅಷ್ಟು ಹಣವನ್ನು ಮಾತ್ರ ಕೊಡುವುದಕ್ಕೆ ಸಾಧ್ಯ.

ಶ್ರೀ ಆಂದಾನಯ್ಯ.—ನ್ಯೂಟನ್ನು ಬದಲಾವಣೆ ಮಾಡುವುದಕ್ಕೆ ಕಾರಣವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಈ ಪ್ರಶ್ನೆ ಈ ಹಿಂದೆಯೂ ಅನೇಕಾವರ್ತಿ ಬಂದಿತ್ತು. ಕೇಂದ್ರ ಸರ್ಕಾರದ ಮಂತ್ರಿಗಳಾದ ಡಾ: ಕೆ. ಎಲ್. ರಾವ್ ಅವರು ಅದನ್ನು ಬದಲಾವಣೆ ಮಾಡಬೇಕೆಂದು ಸಲಹೆ ಮಾಡಿದ್ದರಿಂದ ಬದಲಾಯಿಸಬೇಕಾಗಿ ಬಂತು.

ಶ್ರೀ ಬಿ. ಚನ್ನಬ್ವೈರೇಗೌಡ.—ಈಗ ಸರ್ಕಾರದವರ ಮುಂದೆ ಬಂದಿರತಕ್ಕ ಶಿಫಾರ್ಸುಗಳು ಇರಾಖೆಯವರು ಅಳತೆಮಾಡಿ ಮಾಡಿರತಕ್ಕ ಶಿಫಾರ್ಸುಗಳೇನು ?

ಶ್ರೀ ಎಸ್. ನಿಜಲಿಂಗಪ್ಪ.—ಹೌದು.

ಶ್ರೀ ಡಿ. ಎಸ್. ಪಾಟೀಲ್.—ಮೇಲಿಂದ ಮೇಲೆ ಹೀಗೆ ಜಾಗವನ್ನು ಬದಲಾವಣೆ ಮಾಡುವುದು ಸರಿಯಲ್ಲವಾದ್ದರಿಂದ, ಕೆಲಸವೂ ಕೂಡ ಬೇಗ ಆಗಧಿರುವುದರಿಂದ, ಕೆಲಸ ಬೇಗ ಆಗಲು ಹೀಗೆ ಸ್ಥಳವನ್ನು ಒಂದಾವರ್ತಿ ತೀರ್ಮಾನ ಮಾಡಿದನಂತರ ಪುನಃ ಅದನ್ನು ಬದಲಾವಣೆ ಮಾಡುವುದಿಲ್ಲ ಎಂಬ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಆ ರೀತಿ ಭರವಸೆಯನ್ನು ಕೇಳುವುದೂ ಸರಿಯಲ್ಲ, ಕೊಡುವುದೂ ಸರಿಯಲ್ಲ. ತಜ್ಞರ ಅಭಿಪ್ರಾಯಕ್ಕೆ ನಾವು ಬೆಲೆಯನ್ನು ಕೊಡಲೇಬೇಕು; ಬದಲಾವಣೆ ಸಹಾ ಅಗತ್ಯ.

ಶ್ರೀ ಕೆ. ಲಕ್ಕಪ್ಪ.—ಕಂಟ್ರಾಕ್ಟರ ಅನುಕೂಲಕ್ಕೆ ತಜ್ಞರ ಅಭಿಪ್ರಾಯ ಅಗತ್ಯವೇ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರ ಪ್ರಶ್ನೆಯಬಗ್ಗೆ ನನಗೆ ಭೇದ ಮತ್ತು ಸಹಾನುಭೂತಿಗಳೆರಡೂ ಇವೆ.

ಶ್ರೀ ಜಿ. ಎನ್. ಪಾಟೀರ್.—ನಮ್ಮ ಇಂಜಿನಿಯರುಗಳು ಸ್ಥಳವನ್ನು ಒಂದಾವರ್ತಿ ತೀರ್ಮಾನ ಮಾಡಿದ್ದನ್ನು ಡಾ. ಕೆ. ಎರ್. ರಾವ್ ಅವರು ಬದಲಾಯಿಸುವಂತೆ ಹೇಳುವುದಕ್ಕೆ ಕಾರಣವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಅವರಿಗೆ ಆ ವಿಚಾರದಲ್ಲಿರತಕ್ಕ, ಅವರ ಅನುಭವ ಮತ್ತು ತಜ್ಞತೆಗಳೇ ಕಾರಣ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ಕಂಟ್ರಾಕ್ಟರು 11 ಲಕ್ಷ ರೂಪಾಯಿಗಳನ್ನು ಕೇಳುವುದಕ್ಕೆ ಯಾವ ಯಾವ ಐಟಂ ಕೆಲಸಗಳನ್ನು ಮಾಡಿದ್ದಾನೆ ಅನ್ನುವುದನ್ನು ಈ ಸಭೆಯ ಮುಂದೆ ಇಡುವುದಕ್ಕೆ ಸಾಧ್ಯವೆ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಹಾಗೆ ಪ್ರಿನ್ಸ್ಯೂಮ್ ಮಾಡುವುದು ಸರಿಯಲ್ಲ. ಸರ್ಕಾರದ ಮುಂದೆ ಬಂದಿರತಕ್ಕದ್ದು 54,500 ರೂಪಾಯಿಗಳ ಒಂದು ಅಂದಾಜನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಹೇಳಲಾಗಿದೆ. ಇನ್ನೂ ಹೆಚ್ಚಿನ ತಪಶೀಲುಗಳು ಬೇಕಾದರೆ ಆ ಬಗ್ಗೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿ ; ಉತ್ತರವನ್ನು ಒದಗಿಸಲಾಗುವುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ನನ್ನ ಪ್ರಶ್ನೆಯನ್ನು ತಪ್ಪಾಗಿ ತಿಳಿದುಕೊಂಡರು. ಅತ 11 ಲಕ್ಷ ಕೇಳಿದ್ದರೂ ಸರ್ಕಾರದವರು 54,500 ರೂಪಾಯಿಗಳನ್ನು ಕೊಡುವುದಕ್ಕೆ ಪರಿಶೀಲನೆ ಮಾಡುತ್ತಿದ್ದಾರೆಂದು ಹೇಳಿದ್ದು ಸರಿಯಷ್ಟೆ. ಆದರೆ ನಾನು ಕೇಳಿದ್ದು ಆ 11 ಲಕ್ಷ ರೂಪಾಯಿಗಳನ್ನು ಕೇಳಲು ಅತನು ಯಾವ ಯಾವ ಐಟಂ ಕೆಲಸಗಳನ್ನು ಮಾಡಿರುವುದಾಗಿ ಹೇಳುತ್ತಿದ್ದಾನೆಂಬುದನ್ನು ಸಭೆಗೆ ತಿಳಿಸುವುದಕ್ಕೆ ಸಾಧ್ಯವೇ ಎಂಬುದಾಗಿ ನಾನು ಕೇಳಿದೆ !

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೆ ಮತ್ತೊಂದು ಪ್ರಶ್ನೆ ಕೇಳಿ: ಉತ್ತರವನ್ನು ಒದಗಿಸಲಾಗುವುದು.

ಶ್ರೀ ಕೆ. ಲಕ್ಕಪ್ಪ.—ಕಂಟ್ರಾಕ್ಟರಿಗೆ ಲಕ್ಷಗಟ್ಟಲೆ ಹಣ ಕೊಡುವಂತೆ ಚೀಫ್ ಇಂಜಿನಿಯರವರು ಛತ್ರಾಯ ಹಾಕಿರತಕ್ಕ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅಗಲೆ ಉತ್ತರ ಹೇಳಿದ್ದೇನೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈ ನಾರಾಯಣಪುರದ ಡ್ಯಾಂ ಬಳಿ ಯಾವ ಯಾವ ಐಟಂ ಕೆಲಸಗಳಿಗೆ ಎಷ್ಟೆಷ್ಟು ಹಣ ಖರ್ಚಾಗಿದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ನಿಜಲಿಂಗಪ್ಪ.—ಪ್ರತ್ಯೇಕ ಪ್ರಶ್ನೆಯನ್ನು ಕೇಳಿ, ಉತ್ತರ ಕೊಡಲು ಸಾಧ್ಯವಿದೆ.

ಶ್ರೀ ಸಿದಯ್ಯ ಕಾಶಿಮಠ.—ಈಗ ಕೊಡಬೇಕೆಂದಿರುವ 54,500 ರೂಪಾಯಿಗಳು ಸರಿಯೇ ಅಥವಾ ಅಲ್ಲವೇ ಎಂಬುದನ್ನು ತೀರ್ಮಾನ ಮಾಡಲು ಒಂದು ಕಮಿಷನ್ನನ್ನು ನೇಮಕ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಅನಾವಶ್ಯಕ ಎಂದು ಹೇಳುತ್ತೇನೆ.

ಶ್ರೀ ಜಿ. ಎನ್. ಪಾಟೀರ್.—ಕೇಂದ್ರ ಸರ್ಕಾರದವರು ನಮ್ಮ ಪ್ರಾಜೆಕ್ಟ್‌ಬಗ್ಗೆ ಬದಲಾವಣೆಯನ್ನು ಸೂಚಿಸಿದ್ದರಿಂದ ನಮ್ಮ ಡೆವಲಪ್‌ಮೆಂಟರ್ ಕೆಲಸಗಳಿಗೆ ಧಕ್ಕೆ ಬರಲಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ತಜ್ಞರ ಅಭಿಪ್ರಾಯಕ್ಕೆ ಮನ್ನಣೆ ಕೊಡಲೇ ಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಂಟ್ರಾಕ್ಟ್ ಕೊಡುವ ಮುನ್ನ ಒಂದು ಆರ್ಬಿಟ್ರೇಷನ್ ಕ್ಲಾಜನ್ನು ಇಟ್ಟಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಇಟ್ಟು ಹಾಗೆ ತಿಳಿದುಬರುವುದಿಲ್ಲ.

Sri N. O. SAMAJI.—[In Marathi]

ಶ್ರೀ ಎಸ್. ನಿಜಲಿಂಗಪ್ಪ.—ಸಾಮಾನ್ಯವಾಗಿ ಜಾಗವನ್ನು ನೋಡಿ ಇಂಜಿನಿಯರುಗಳು ತೀರ್ಮಾನ ಮಾಡುತ್ತಾರೆ. ಆದಾಗ್ಯೂ ತಜ್ಞರ ಅಭಿಪ್ರಾಯಕ್ಕೆ ನಾವು ಮನ್ನಣೆ ಕೊಡಲೇಬೇಕು.

ಶ್ರೀ ಎಸ್. ಶಿವಪ್ಪ.—ಹೀಗೆ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಸ್ಥಳಾಂತರ ಮಾಡುವುದರ ಬಗ್ಗೆ ಮತ್ತು ಅಂದಾಜಗಳ ಪುನರ್ವಿಮರ್ಶೆಯ ಬಗ್ಗೆ ಇದುವರಗೆ ಎಷ್ಟು ಜನ ಇಂಜಿನಿಯರುಗಳಿಗೆ ಶಿಕ್ಷೆಯನ್ನು ಮಾಡಲಾಗಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಇದೊಂದು ದೊಡ್ಡ ಪ್ರಶ್ನೆ, ಇದಕ್ಕೆ ಜವಾಬ್ ಕೊಡುವುದು ಬಹಳ ಕಷ್ಟ.

Mr. SPEAKER.—Question hour is over.